ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 120-124
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನಗಳಲ್ಲಿ ಸಾರ್ವತ್ರಿಕ ಮೌಲ್ಯಗಳು: ಬಸವಣ್ಣನವರ ಆಯ್ದ ವಚನಗಳನ್ನು ಅನುಲಕ್ಷಿಸಿ

**ಎಸ್. ಪಿ. ಅರುಣ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕಡೂರು.

***Abstract:***
*ಬಸವಣ್ಣನವರ ವಚನಗಳು ಮಾನವೀಯ ಮೌಲ್ಯಗಳು, ಸಮಾನತೆ, ಕಾಯಕ, ದಾಸೋಹ, ಸತ್ಯ, ಪ್ರಾಮಾಣಿಕತೆ ಹಾಗೂ ಸಾಮಾಜಿಕ ನ್ಯಾಯದ ಮಹತ್ವವನ್ನು ಸಾರುತ್ತವೆ. ಆಯ್ದ ವಚನಗಳ ಮೂಲಕ ಸಾರ್ವತ್ರಿಕ ಮೌಲ್ಯಗಳು ಮಾನವ ಜೀವನದ ಮೇಲೆ ಬೀರುವ ಪ್ರಭಾವವನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಜಾತಿ, ಧರ್ಮ, ಲಿಂಗ ಮತ್ತು ಸಾಮಾಜಿಕ ಅಸಮಾನತೆಗಳನ್ನು ವಿರೋಧಿಸಿದ ಬಸವಣ್ಣನವರ ವಿಚಾರಗಳು ಸಮಾನತೆಯ ಸಮಾಜ ನಿರ್ಮಾಣಕ್ಕೆ ಪ್ರೇರಣೆ ನೀಡುತ್ತವೆ. ಕಾಯಕವೇ ಕೈಲಾಸ ಎಂಬ ತತ್ವವು ಶ್ರಮದ ಗೌರವವನ್ನು ಎತ್ತಿಹಿಡಿದರೆ, ದಾಸೋಹದ ಪರಿಕಲ್ಪನೆಯು ಹಂಚಿಕೆ ಮತ್ತು ಸಹಬಾಳ್ವೆಯ ಮಹತ್ವವನ್ನು ಪ್ರತಿಪಾದಿಸುತ್ತದೆ. ಬಸವಣ್ಣನವರ ವಚನಗಳಲ್ಲಿ ಪ್ರತಿಪಾದಿತವಾಗಿರುವ ಈ ಸಾರ್ವತ್ರಿಕ ಮೌಲ್ಯಗಳು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿದ್ದು, ಮಾನವೀಯತೆ ಮತ್ತು ನೈತಿಕ ಬದುಕಿಗೆ ಮಾರ್ಗದರ್ಶನ ನೀಡುತ್ತವೆ.*

***Keywords:*** *ಬಸವಣ್ಣ, ವಚನ ಸಾಹಿತ್ಯ, ಸಾರ್ವತ್ರಿಕ ಮೌಲ್ಯಗಳು, ಕಾಯಕ ಮತ್ತು ದಾಸೋಹ, ಸಾಮಾಜಿಕ ಸಮಾನತೆ*

## ಪೀಠಿಕೆ

'ವಚನಗಳು' ಕನ್ನಡ ಸಾಹಿತ್ಯದ ಅಮೂಲ್ಯ ಸಂಪತ್ತು. ವಚನಗಳಲ್ಲಿ ಪ್ರಸ್ತಾಪವಾಗಿರುವ ಧಾರ್ಮಿಕ ಹಾಗೂ ಸಾಮಾಜಿಕ ವಿಚಾರಗಳು ಕನ್ನಡನಾಡಿಗಷ್ಟೇ ಸೀಮಿತವಾಗಿರದೆ ಅಖಂಡ ಭಾರತವನ್ನು ವ್ಯಾಪಿಸಿಕೊಂಡಿವೆ. ವಚನಕಾರರು ತಮ್ಮ ವಚನಗಳ ಮೂಲಕ ಜನಜೀವನಕ್ಕೆ ತೊಡಿಸಿದ ಮೌಲ್ಯಗಳು ಉದಾತ್ತ ಶತ–ಶತಮಾನಗಳ ಎಲ್ಲೆಯನ್ನು ಮೀರಿ ಜೀವಂತವಾಗಿ ಉಳಿಯಬಲ್ಲ ಸತ್ಯ ಹೊಂದಿವೆ. ಎಂಟುನೂರು ವರ್ಷಗಳ ಸುದೀರ್ಘ ಕಾಲಾವಧಿಯ ನಂತರದ ಈ ಸಂದರ್ಭದಲ್ಲೂ ಬಸವಾದಿ ಶಿವಶರಣರ ಸಾಧನೆ ಮತ್ತು ವಿಚಾರಗಳು ನಮಗೆ ಮಾರ್ಗದರ್ಶಿಯಾಗುವಂತಿವೆ ಎಂದಾಗ ಅವುಗಳಲ್ಲಿರುವ ಮಾಹಿತಿಯಷ್ಟೆಂಬುದು ತಿಳಿದು ಬರುತ್ತದೆ.

### ವಚನ ಅರ್ಥ ಮತ್ತು ವ್ಯಾಪ್ತಿ

'ವಚನ' ಎಂದರೆ 'ಪ್ರಮಾಣ', 'ಕೊಟ್ಟ ಮಾತು' ಎಂದರ್ಥ. ವಚನ ಮತ್ತು ವಚನ ಸಾಹಿತ್ಯ ಎನ್ನುವುದು ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಒಂದು. 11ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ 12ನೇ ಶತಮಾನದ ಕಡೆಯವರೆಗೂ ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು ಬಂತು. ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ

***Please cite this article as:*** ಅರುಣ,ಎಸ್.ಪಿ. (2025). ವಚನಗಳಲ್ಲಿ ಸಾರ್ವತ್ರಿಕ ಮೌಲ್ಯಗಳು: ಬಸವಣ್ಣನವರ ಆಯ್ದ ವಚನಗಳನ್ನು ಅನುಲಕ್ಷಿಸಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 120–124

ವಿಶೇಷ ಪ್ರಕಾರ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗತಿಯಾಯಿತು.

12ನೇ ಶತಮಾನದಲ್ಲಿ ಉದಯಿಸಿದ ಧರ್ಮ ಪ್ರೇರಿತ ಸಾಹಿತ್ಯವಾದ ವಚನವು, ಕನ್ನಡದ ಪ್ರಾಚೀನ ಸಾಹಿತ್ಯದಡಿಯಲ್ಲಿ ವರ್ಗಹಿಸಲ್ಪಟ್ಟಿದೆ. ಸ್ವಂತಿಕೆಯಿಂದ ಮೆರವ ವಚನಗಳು ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳೆದು ವಿಜೃಂಭಿಸಿ ಮುಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ ವಿಶ್ವಸಾಹಿತ್ಯದಲ್ಲೂ ಒಂದು ಅವಿಭಾಜ್ಯ ಅಂಗವಾಗಿ ಉಳಿದಿದೆ. ವಚನ ಸಾಹಿತ್ಯವನ್ನು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ನೀಡಿದರು.

ಸಮಾಜದ ಎಲ್ಲಾ ಜಾತಿಯವರು ವಚನವನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯ ಒಂದು ಚಳುವಳಿಯೂ ಆಯಿತು. ಬಂಡಾಯ ಸಾಹಿತ್ಯಕ್ಕಿಂತ ಮೊದಲು ಕನ್ನಡ ನಾಡಿನಲ್ಲಿ ವಚನ ಒಂದು ಚಳುವಳಿಯ ಮುಖವಾಣಿಯಾಗಿತ್ತೆಂದರೆ ಅದರ ಸಾಮಾಜಿಕ ವ್ಯಾಪಕತೆ ಅಪಾರವಾದುದೆಂಬುದು ಅರಿವಿಗೆ ಬಾರದೆ ಇರದು. ವಚನಗಳು ಅತ್ಯಂತ ಸರಳ ಹಾಗೂ ನೇರವಾಗಿ ದೇಸಿಯ ಸೊಗಡಿನಿಂದ ಕೂಡಿವೆ. ಹಲವಾರು ಕವಿಗಳು, ಮಠಾಧೀಶರು, ವೀರಶೈವ ಸಿದ್ಧಾಂತವನ್ನು ಅಳವಡಿಸಿ ಸಾಹಿತ್ಯ ರಚಿಸಿದ್ದರೂ, ಇದೇ ವೀರಶೈವ ಸಾಹಿತ್ಯದಲ್ಲಿ ಮುಖ್ಯ ಮತ್ತು ಅಪರೂಪದ ಅಭಿವ್ಯಕ್ತಿಯೆಂದರೆ ವಚನ ಸಾಹಿತ್ಯ. ಅದು ಸ್ಥಾವರ ಸಮಾಜವನ್ನು ತಿರಸ್ಕರಿಸಿ ಜಂಗಮ ಸಮಾಜವನ್ನು ನಂಬಿದ ಬಹಳ ದೊಡ್ಡ ಮಾನವೀಯ ಮೌಲ್ಯ ಕಾರ್ಯ ಮತ್ತು ದಾಸೋಹಗಳ ಮೂಲಕ ಸಮಾಜೋತ್ಥಾನಗಳ ಸಮಪಾಲು ಸಿದ್ಧಾಂತವನ್ನು ಮಂಡಿಸುವ ಈ ಚಳವಳಿ ಭಾರತೀಯ ಸಂಸ್ಕೃತಿಯಲ್ಲೇ ಅತಿ ಪ್ರಮುಖವಾದುದು. ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಮಹಾದೇವಿ ಅಕ್ಕ, ಜೇಡರ ದಾಸಿಮಯ್ಯ, ಸಿದ್ಧರಾಮ, ಮೋಳಿಗೆ ಮಾರಯ್ಯ, ಮಡಿವಾಳ ಮಾಚಿದೇವರಂತಹ ಹಿರಿಯ ಶರಣ–ಶರಣೆಯರು ವಚನ ಸಾಹಿತ್ಯಕ್ಕೆ ಮಹತ್ತರ ಕೊಡುಗೆ ನೀಡಿದವರ ಪೈಕಿ ಅಗ್ರಗಣ್ಯರು. ಈ ಪೈಕಿ ಬಸವಣ್ಣನವರ ಆಯ್ದ ವಚನಗಳನ್ನು ಈ ಲೇಖನದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ.

**ವಚನಕಾರರಾಗಿ ಬಸವಣ್ಣನವರು**

ವಿಜಾಪುರ ಜಿಲ್ಲೆ, ಬಾಗೇವಾಡಿ ಬಸವಣ್ಣನವರು ಜನಿಸಿದ ಗ್ರಾಮ. ಮಾದಿರಾಜ ಮತ್ತು ಮಾದಲಾಂಬಿಕೆ ಇವರ ತಂದೆ–ತಾಯಿ. ಇವರದ್ದು ಮೂಲತಃ ಶೈವ ಬ್ರಾಹ್ಮಣ ವರ್ಗಕ್ಕೆ ಸೇರಿದ ಕುಟುಂಬ. ಬಸವಣ್ಣನವರು ವಚನಗಳೆಂಬ ಹೊಸ ಸಾಹಿತ್ಯ ಪ್ರಕಾರವನ್ನೇ ಆರಂಭಿಸಿದರು. ಗದ್ಯ ಕಾವ್ಯದಲ್ಲಿ ಅನೇಕ ವಿಧಗಳಿವೆ. ಪದ್ಯದಂತಿರುವ ಗದ್ಯಕ್ಕೆ ಪದ್ಯಗಂಧಿ ಎನ್ನುವರು. ಈ ಪ್ರಕಾರವು ಗದ್ಯಪದ್ಯ ರೂಪವಾದ ಚಂಪುವಿಗಿಂತಲೂ ಭಿನ್ನವಾಗಿರುವುದು. ಭಗವಂತನನ್ನು ವಿಷಯವನ್ನಾಗಿಸಿಕೊಂಡು ಭಾವನಾ ಪ್ರವಾಹವನ್ನು ಹರಿಸುವ ಭಕ್ತಿಯ ಯೋಗವಾದಾಗ ಭಗವಂತ ಮತ್ತು ಭಕ್ತ ಇವರ ಸಂಬಂಧ ಉಂಟಾಗುವುದು. ಈ ಸಂಸಾರದಿಂದ ಬಿಡುಗಡೆ ಪಡೆಯಲು ಭಕ್ತ ಪ್ರಯತ್ನಿಸುವನು. ಮಾತು ಮನಸ್ಸು ಕೃತಿಗಳ ಮೂಲಕವಾಗಿ ಪರಮೇಶ್ವರನಲ್ಲಿ ಭಕ್ತಿಯನ್ನು ಸಂಪಾದಿಸಿಕೊಳ್ಳುವ ಭಕ್ತಿಯ ಮಾರ್ಗದರ್ಶನವು ವಚನಗಳಲ್ಲಿದೆ. ಬಸವಣ್ಣನವರು ಲೋಕ ಜೀವನ ಪಾಠಶಾಲೆಯಲ್ಲಿ ಶಿಕ್ಷಣವನ್ನು ಪಡೆದು ಜಿತೇಂದ್ರಿಯರಾಗಿ ನೀತಿ ತತ್ವಗಳನ್ನು ಆಚರಣೆ ಮಾಡಿ ಕಾವ್ಯಕಲೆಯ ಮೂಲಕ ಸಮರ್ಥ ಕಾವ್ಯಶಕ್ತಿಯಿಂದ ಸಹೃದಯರ ಮುಂದೆ ಬಿತ್ತಿಸಿದರು. ರಸಪ್ರಜ್ಞೆ ನೀತಿ ಪ್ರಜ್ಞೆ ಬಸವಣ್ಣನವರ ವಚನಗಳಲ್ಲಿ ತುಂಬಿವೆ.

***ನಾನೆಷ್ಟು ಭಕ್ತಿಯ ಮಾಡಿದರೇನು, ನಿಮ್ಮ***
***ಶರಣರ ನೆನೆವುದೇ ಲೇಸು ಕಾಣಾ!***
***ಕೆರೆಯು ತುಂಬಿ ಕೆರೆಗೆ ಹೊರೆಯಾದಲ್ಲಿ.***
***ಕರೆವ ಹಸುವಿಂಗೆ ಹಾಲಿನ ಹೊರೆಯೇ?***
***ಅರಸಂಗೆ ಆಳು ಹೆಚ್ಚಾದಲ್ಲಿ ಅರಸಂಗೆ ಭಾರವೇ?***
***ಕೂಡಲಸಂಗಮದೇವಾ.***

ಬಸವಣ್ಣನವರು ಸ್ವತಃ ತಾವೇ ಎಷ್ಟು ಭಕ್ತಿಮಾಡಿದರೂ, ಅದಕ್ಕಿಂತಲೂ ಹೆಚ್ಚಾಗಿ ಶಿವಶರಣರನ್ನು ನೆನೆಯುವುದು ಮತ್ತು ಗೌರವಿಸುವುದು ಶ್ರೇಷ್ಠವಾದುದು. ಕೆರೆತುಂಬಿ ಹರಿದರೆ ಅದಕ್ಕೆ ಕೆರೆಯೇ ಹೊರೆಯಾಗುವುದಿಲ್ಲ. ಕರೆಯುವ ಹಸುವಿಗೆ ಅದರ ಕೆಚ್ಚಲಿನಲ್ಲಿ ಹಾಲು ಹೆಚ್ಚಾದರೆ ಅದು ಹಸುವಿಗೆ ಭಾರವಾಗುವುದಿಲ್ಲ. ರಾಜನಿಗೆ ಉತ್ತಮ ಸೇವಕರು ಹೆಚ್ಚಾದಷ್ಟು ಅವನಿಗೆ ಶಕ್ತಿ ಹೆಚ್ಚುತ್ತದೆಯೇ ಹೊರತು ಭಾರವಾಗುವುದಿಲ್ಲ.

***ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ***
***ನಿಗಳವನಿಕ್ಕುವೆ***
***ತರ್ಕದ ಬೆನ್ನಬಾರನೆತ್ತುವೆ ಆಗಮದ***
***ಮೂಗ ಕೊಯಿವೆ ನೋಡಯ್ಯಾ ಮಹಾದಾನಿ***
***ಕೂಡಲಸಂಗಮದೇವಾ***
***ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ.***

ವೇದಗಳ ಅಹಂಕಾರವನ್ನು ಮರೆಮಾಡಿ ಅದರ ಪ್ರಭಾವವನ್ನು ಅಡಗಿಸುತ್ತೇನೆ, ಮನುಷ್ಯರನ್ನು ಜಾತಿ–ಮತಗಳ ಹೆಸರಿನಲ್ಲಿ ಬಂಧಿಸುವ ಕಟ್ಟುಪಾಡುಗಳ ಶಾಸ್ತ್ರಗಳಿಗೆ ಸಂಕೋಲೆಹಾಕಿ ಬಂಧಿಸುತ್ತೇನೆ. ಸತ್ಯ ಮರೆಮಾಚಿ ಕೇವಲ ಒಣವಾದ–ವಿವಾದ ಮಾಡುವ ತರ್ಕಶಾಸ್ತ್ರದ ಬೆನ್ನಿಗೆ ಚಾವಟಿಯಿಂದ ಏಟು ನೀಡುತ್ತೇನೆ. ಬಾಹ್ಯ ಆಚರಣೆ ಮತ್ತು ಸಂಪ್ರದಾಯಗಳನ್ನು ಕಡ್ಡಾಯಗೊಳಿಸುವ ಆಗಮಗಳ ಅಹಂಕಾರದ ಮೂಗನ್ನು ಕೊಯ್ಯುತ್ತೇನೆ. ಉನ್ನತ ಜಾತಿಯ ಹಮ್ಮಿಲ್ಲದೆ ತಳಸಮುದಾಯದ ಶರಣನಾದ ಮಾದಾರ ಚೆನ್ನಯ್ಯನನ್ನು ತನ್ನ ತಂದೆಯ ಸ್ಥಾನದಲ್ಲಿಟ್ಟು ತಾನು ಅವನ ಮನೆಯ ಮಗ ಎಂದು ಬಸವಣ್ಣನವರು ಹೆಮ್ಮೆಯಿಂದ ಘೋಷಿಸುತ್ತಾರೆ. ಈ ವಚನದಲ್ಲಿ ದೀನರ ಉದ್ಧಾರದ ಕರುಣೆಯ ಕರ್ಮವು ಭಗವಂತನ ಕೃಪೆಗೆ ಕಾರಣವೆಂದು ಸೂಚಿಸಿದ್ದಾರೆ.

***"ತನುವ ಬೇಡಿದಡೀವೆ, ಮನವ***
***ಬೇಡಿದಡೀವೆ, ಧನವ ಬೇಡಿದಡೀವೆ***
***ನಿಮ್ಮ ಶರಣಂಗೆ"***

ಈ ವಚನವು ದೇವರಲ್ಲಿ ಸಂಪೂರ್ಣ ಶರಣಾಗತಿ ಮತ್ತು ನಿಷ್ಕಾಮ ಭಕ್ತಿಯ ಮಹತ್ವವನ್ನು ತಿಳಿಸುತ್ತದೆ.

***ದೇವ ದೇವ ಮಹಾಪ್ರಸಾದ ನೀವೆಂದಂತೆ!***
***ಕಾಯಕಂದಿದಡೇನು? ಒಡಲು***
***ವಂದಿದಡೇನು?***
***ಎನ್ನ ಮನಕ್ಕೆ ನೀನೆ ಸಂತೋಷ!***

ಹೇ ದೇವನೆ ನೀನು ಹೇಗೆ ನಡೆಸಿಕೊಂಡರೂ, ಏನನ್ನು ನೀಡಿದರೂ ಅದು ನಿನ್ನ ಮಹಾಪ್ರಸಾದ ಎಂದು ಭಾವಿಸಿ ನಾನು ಸ್ವೀಕರಿಸುತ್ತೇನೆ. ನಿನ್ನ ಇಚ್ಚೆಯೇ ನನ್ನ ಇಚ್ಚೆ. ಬದುಕಿನ ಪಯಣದಲ್ಲಿ ಈ ಶರೀರ ಕಷ್ಟದಿಂದ ಕಪ್ಪಾದರೂ ಚಿಂತೆಯಿಲ್ಲ. ಒಡಲು ಸೊರಗಿ ಹೋದರೂ ಚಿಂತೆಯಿಲ್ಲ. ಹೊರಗಿನ ಕಷ್ಟಗಳು ಏನೇ ಇದ್ದರೂ ನನ್ನ ಮನಸ್ಸಿಗೇ ನೀನೇ ಪರಮ ಸಂತೋಷ ಮತ್ತು ನೆಮ್ಮದಿಯಾಗಿದ್ದೀಯ ಎನ್ನುತ್ತಾರೆ.

***ನಿಮ್ಮ ಚರಣದ ಸಂದುಭೇದವಿಲ್ಲದೆ***
***ನಿಮ್ಮ ಶರಣರ ಚರಣದ***
***ಸಂದು ಭೇದವಿಲ್ಲದೆ***
***ಕೂಡಲ ಸಂಗಮದೇವಾ***
***ಲಿಂಗವೇ ಲಿಂಗವ ಮುಟ್ಟಿದಂತಾಯಿತೆನ್ನ ಭಕ್ತಿ.***

ಭಕ್ತನಾದವನು ಶಿವನ ಪಾದಗಳನ್ನು ಮತ್ತು ಶಿವಶರಣರ ಪಾದಗಳನ್ನು ಭೇದ–ಭಾವವಿಲ್ಲದೆ ಒಂದೇ ಸಮನಾಗಿ ಕಾಣಬೇಕು ಭೇದವಿಲ್ಲದೆ ನಿಷ್ಕಲ್ಮಶ ಮನಸ್ಸಿನಿಂದ ಶರಣರನ್ನು ಪೂಜಿಸಿದಾಗ ಆ ಭಕ್ತಿಯು ಲಿಂಗವೇ ಲಿಂಗವನ್ನು ಮುಟ್ಟಿದಷ್ಟು ಪವಿತ್ರವೂ, ಪರಿಪೂರ್ಣವೂ ಆಗುತ್ತದೆ. ಭಗವಂತ ಮತ್ತು ಆತನ ಶರಣರು ಬೇರೆಯಲ್ಲ ಇಬ್ಬರು ಒಂದೇ ಎಂಬ ಅದ್ವೈತ ಭಾವವನ್ನು ಬಸವಣ್ಣನವರು ಇಲ್ಲಿ ಉಲ್ಲೇಖಿಸಿದ್ದಾರೆ.

***ದಾಸೋಹವೆಂಬ ಸೋಹೆಗೊಂಡು ಹೋಗಿ***
***ಗುರುವ ಕಂಡೆ, ಲಿಂಗವ ಕಂಡೆ***
***ಜಂಗಮವ ಕಂಡೆ, ಪ್ರಸಾದವ ಕಂಡೆ***
***ಕೂಡಲಸಂಗಮದೇವಾ***

ದಾಸೋಹವೆಂಬ ಹಾದಿಯಲ್ಲಿ ಹೋಗಿ ಅದರ ಮೂಲಕ ಗುರು–ಲಿಂಗ–ಜಂಗಮ–ಪ್ರಸಾದವನ್ನು ಕಂಡು ಆ ನಾಲ್ಕು ಸಂಪತ್ತನ್ನು ಹೊಂದಿದವನೆಂದು ಬಸವಣ್ಣನವರು ತಿಳಿಸಿದ್ದಾರೆ. ಶರಣರ ದೃಷ್ಟಿಯಲ್ಲಿ ಗುರು–ಲಿಂಗ–ಜಂಗಮ–ಪ್ರಸಾದಗಳು ಸಂಪತ್ತಿನ ವಿಧಗಳು ಇವು ಅಮೂಲ್ಯವಾದ ರತ್ನಗಳು ಇಂತಹ ರತ್ನಗಳನ್ನು ಸಂಪಾದಿಸಲು ದಾಸೋಹದ ಮಾರ್ಗ ಒಂದು ಒಳ್ಳೆಯ ಮಾಧ್ಯಮವಾಗಿದೆಯೆಂದು ವಚನಕಾರರು ಸೂಚ್ಯವಾಗಿ ಹೇಳಿದ್ದಾರೆ.

***ನೆಲವೊಂದೆ, ಹೊಲಗೇರಿ ಶಿವಾಲಯಕ್ಕೆ***
***ಜಲವೊಂದೆ ಶೌಚಾಚಮನಕ್ಕೆ***
***ಕುಲವೊಂದೆ ತನ್ನ ತಾನರಿದವಂಗೆ***
***ಫಲವೊಂದೆ ಷಡುದರುಶನ ಮುಕ್ತಿಗೆ***
***ನಿಲುವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ***

'ಮಾನವ ಜಾತಿ ಒಂದೇ' ಎಂಬ ನಿಲುವು ಬಸವಣ್ಣನವರ ಈ ವಚನದ ಆಶಯವಾಗಿದೆ. ಕವಿ ಪಂಪ ಹೇಳುವ ಹಾಗೆ 'ಮಾನವಜಾತಿ ತಾನೊಂದೆ ವಲಂ' ಎಂಬ ತತ್ವಕೂಡ ಬಸವಣ್ಣನ ವಚನದಲ್ಲಿ ಅನುರಣಿತವಾಗಿರುವುದನ್ನು ಕಾಣಬಹುದು.

***ಇವನಾರವ, ಇವನಾರವ ಇವನಾರವ***
***ನೆಂದೆನಿಸದಿರಯ್ಯಾ***
***ಇವನಮ್ಮವ, ಇವನಮ್ಮನ, ಇವನಮ್ಮವ***
***ನೆಂದೆನಿಸಯ್ಯಾ***
***ಕೂಡಲಸಂಗಮದೇವಾ ನಿಮ್ಮ ಮನೆಯ***
***ಮಗನೆನಿಸಯ್ಯಾ.***

ಎಲ್ಲಾ ಶರಣರಿಗೂ ಪ್ರಿಯವಾದ, ಆತ್ಮೀಯ ವ್ಯಕ್ತಿಯಾಗಿ ಬದುಕಬೇಕೆಂಬ ಬಯಕೆಯ ಜೊತೆಗೆ, ಬದ್ಧಜೀವಿ ಎಂದೆನಿಸದೆ ಶಿವನಿಗೆ ಪ್ರಿಯನಾದ ಮುಕ್ತಜೀವಿಯೂ ಆಗಬೇಕೆಂಬ ಆಧ್ಯಾತ್ಮಿಕ ಅಭೀಪ್ಸೆಯೂ ಈ ವಚನದಲ್ಲಿ ಧ್ವನಿತವಾಗಿದೆ.

"ಆಚಾರವೇ ಸ್ವರ್ಗ, ಅನಾಚಾರವೇ ನರಕ, ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ" ಇಂತಹ ಸೂತ್ರಬದ್ಧ ಮಾತುಗಳ ಮೂಲಕ ಸಾರ್ವತ್ರಿಕ ನೀತಿಯನ್ನು ಜೀವನ ಮೌಲ್ಯವನ್ನು ಸಾರಿದ್ದಾರೆ.

***ಹಬ್ಬಕ್ಕೆ ತಂದ ಹರಕೆಯ ಕುರಿ***
***ತೋರಣಕ್ಕೆ ತಂದ ತಳಿರ ಮೇಯಿತ್ತು***
***ಕೊಂದಹರೆಂಬುದನರಿಯದೆ ಬೆಂದೊಡಲ ಹೊರೆಯ ಹೋಯಿತ್ತು***
***ಅದಂದೆ ಹುಟ್ಟಿತು, ಅದಂದೆ ಹೊಂದಿತು***
***ಕೊಂದವರುಳಿದರೆ ಕೂಡಲಸಂಗಮದೇವ?***

ಮನುಷ್ಯನ ಸ್ವಭಾವತಃ ಗುಣವನ್ನು ತಿಳಿಸುವ ಈ ವಚನ ಅರ್ಥಪೂರ್ಣ ಮೌಲ್ಯವನ್ನು ಧ್ವನಿಸುತ್ತದೆ. ಈ ದೇಹ ನಶ್ವರ ಎಂದು ತಿಳಿದಿದ್ದರೂ ಕೂಡ ಮೋಹವನ್ನು ಬಿಡುವುದಿಲ್ಲ ಎಂದು ಹೇಳುತ್ತಾ ದೇಹದ ನಶ್ವರತೆಯನ್ನು ಪರಿಭಾವಿಸದೆ ಭೋಗಾಸಕ್ತಿಯಲ್ಲಿ ಮುಳುಗಿರುವ ಮನುಷ್ಯನ ಸ್ಥಿತಿಯನ್ನು ವಿಡಂಬನೆಯ ಮೂಲಕ ಚಿತ್ರಿಸಿದ್ದಾರೆ. ಅವರ ವಚನಗಳಲ್ಲಿ ನಿರೂಪಿತಗೊಂಡಿರುವ, ಅಭಿವ್ಯಕ್ತಿಗೊಂಡಿರುವ ಮೌಲ್ಯಗಳು ಆ ಕಾಲಕಷ್ಟೇ ಅಲ್ಲದೇ ಸರ್ವಕಾಲಕ್ಕೂ ಸಲ್ಲುವ ಸಾರ್ವತ್ರಿಕ ಮೌಲ್ಯಗಳಾಗಿ ಗೋಚರಿಸುತ್ತವೆ.

ಬಸವಣ್ಣನವರ ಮನಸ್ಸು ಶಿವಮಯವಾಗಿತ್ತು, ಶಿವನನ್ನು ಬಿಟ್ಟರೆ ಶಿವಶರಣರ ಕುರಿತು ವಿಚಾರ ನಡೆಸಿದ್ದರೆ ಶಿವನಿಷ್ಠೆ ಶಿವೋಪಾಸನೆ ಶಿವಾಚಾರ, ಎಲ್ಲವನ್ನು ಶಿವಪಥಕ್ಕೆ ತಿರುಗಿಸಿದ್ದರು. ಅಂತಹ ಭಕ್ತಿಯ ಪರಕಾಷ್ಠತೆ, ಭವ–ಪ್ರಭರತೆಯನ್ನೇ ಬಸವಣ್ಣನವರ ವಚನಗಳಲ್ಲಿ ನಾವು ಕಾಣಬಹುದಾಗಿದೆ. ಕೂಡಲಸಂಗಯ್ಯನಲ್ಲಿ ಅವನ ಪ್ರೀತಿಗಾಗಿ ಪ್ರಾರ್ಥಿಸಿದ ರೀತಿ ಅತ್ಯಂತ ಸುಂದರವಾಗಿದೆ. "ಮಾತು ಮನಸ್ಸಾಗಿ ಮನಸ್ಸು ಮಾತಾಗಿ ಅವರಡು ಬಸವಣ್ಣನಲ್ಲಿರಲು ಬಸವಣ್ಣ ಕೂಡಲಸಂಗಮನಲ್ಲಿದ್ದಾನೆ ಶರೀರವನ್ನು ದಂಡಿಸಿ ದರ್ಶಿಸಿ ನಿನ್ನಾಸ್ತುತಿಯ ಮಾಡಿ ಒಲಿಸುವೆನು" ಎಂದು ಸಂಗಮದೇವನಿಗೆ ಹೇಳಿದ್ದಾರೆ. "ವಚನದಲ್ಲಿ ನಾಮಾಮೃತ ತುಂಬಿ, ಭಕ್ತಿ ಸುಭಾಷೆಯ ನುಡಿಯ

ನುಡಿವೆ, ನುಡಿದಂತೆ ನಡೆವೆ, ನಡೆಯೊಳಗೆ ನುಡಿಯ ತೋರಿಸುವೆ" ಈ ರೀತಿ ಆಡಿದ್ದನ್ನು ಮಾಡಿ ಆಚರಿಸಿ ತೋರಿಸಿದ ಮಹಾನುಭಾವರು ಬಸವಣ್ಣನವರಾಗಿದ್ದಾರೆ. "ನಾಳೆ ಬಪ್ಪುದು ನಮಗಿಂದೆ ಬರಲಿ, ಇಂದು ಬಪ್ಪುದು ನಮಗೀಗಲೆ ಬರಲಿ, ಇದಕ್ಕಾರಂಜುವರು, ಇದಕ್ಕಾರಳುಕುವರು" ಎಂಬಲ್ಲಿ ವ್ಯಕ್ತಿತ್ವದಲ್ಲಿ ವೀರಭಾವವಿದೆ–ಧೈರ್ಯವಿದೆ. ಈ ಮೂಲಕ ಬಸವಣ್ಣನವರು ಭಾರತ ದೇಶದಲ್ಲಿಯೇ ಅತ್ಯಂತ ಸುಂದರ ಸುಮಧುರವಾದ ವಚನ ಪುಷ್ಪಗಳನ್ನು ಹರಡಿ ಹೋಗಿದ್ದಾರೆ.

ಕಾಯಕವೇ ಕೈಲಾಸ ವಚನಕಾರರು ಅನುಷ್ಠಾನಕ್ಕೆ ತಂದ ಅಮೂಲ್ಯ ಸಾಮಾಜಿಕ ಧಾರ್ಮಿಕ ತತ್ವಗಳಲ್ಲಿ ಕಾಯಕ ಪ್ರಮುಖವಾದದ್ದು "ಕಾಯಕವೇ ಕೈಲಾಸ" ಇದು ಭಾರತೀಯ ಜನಜೀವನಕ್ಕೆ ಅವರು ಶಾಸ್ತ್ರೀಕರಿಸಿಕೊಟ್ಟ ಒಂದು ಚಿರಂತನ ಮೌಲ್ಯ. ಈ ತತ್ವದ ಮಹತ್ವವೆಷ್ಟೆಂಬುದು ಇಪ್ಪತ್ತನೆಯ ಶತಮಾನದಲ್ಲಿರುವ ನಮಗಿಂದು ಪ್ರತ್ಯಕ್ಷ ಮನವರಿಕೆಯಾಗುತ್ತಲಿದೆ. "ಕೇವಲ ಉದ್ಯೋಗಕ್ಕೂ ಕಾಯಕಕ್ಕೂ ಶಾಸ್ತ್ರೀಯವಾದ ಅಂತರವುಂಟು. ಲೋಕದ ಮನುಷ್ಯರು ತಮ್ಮ ಉದರ ಪೋಷಣೆಗಾಗಿ ಅಥವಾ ಲೋಕ ಸಂಗ್ರಹಾರ್ಥವಾಗಿ ಮಾಡುವುದು ಉದ್ಯೋಗವಾದರೆ, ಶರಣರ ದಾಸೋಹಕ್ಕಾಗಿ, ದಾಸೋಹ ಭಾವನೆಯಿಂದ ಆತ್ಮೋದ್ಧಾರ ಹಾಗೂ ಸಮಾಜೋದ್ಧಾರಕ್ಕಾಗಿ ಮಾಡುವ ಉದ್ಯೋಗ ಕಾಯಕ" ಎಂದು ವಿಶ್ಲೇಷಿಸಿದ್ದಾರೆ.

**ಉಪಸಂಹಾರ**

ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಪುರುಷರಾಗಿ ಕಂಗೊಳಿಸಿ ಸಮಾಜದ ಅಂಕುಡೊಂಕನ್ನು ಸರಿಪಡಿಸಲು ತತ್ವಜ್ಞಾನಿಯಾಗಿ ಬೆಳಗಿದ ಮಹಾಚೇತನ ಬಸವಣ್ಣ ಸಮಾಜ ಸುಧಾರಕರಾಗಿ, ಕವಿಯಾಗಿ, ಭಾವ ಜೀವಿಯಾಗಿ, ವಿಶ್ವಮಾನ್ಯರಾದವರು. ಗೌತಮಬುದ್ಧನ ದಯೆ, ವರ್ಧಮಾನ ಮಹಾವೀರನ ಅಹಿಂಸೆ, ಸತ್ಯ ನಿಷ್ಠೆ ಹೀಗೆ ಅನೇಕ ಗುಣಗಳಿಗೆ ಆಶ್ರಯರಾದವರು ಬಸವಣ್ಣ, ಕಲ್ಯಾಣದಲ್ಲಿ ಜ್ಞಾನದೀವಿಗೆಯನ್ನು ಬೆಳಗಿಸಿ ವಚನ ಪುಷ್ಪಗಳೆಂಬ ಸುವಾಸನೆಯನ್ನು ಬೀರಿದರು. ಲಿಂಗ ಮೆಚ್ಚಿ ಅಹುದು ಅಹುದು ಎಂಬಂತೆ ಅಮೃತ ತುಂಬಿದ ನುಡಿಗಳನ್ನು ಬಿಟ್ಟು ಹೋಗಿದ್ದಾರೆ. ಕಾಯಕ ತತ್ವದ ಮಹತ್ವವನ್ನು ತಿಳಿಸಿ, ಸರ್ವ ಸಮಾನತೆಯ ತತ್ವವನ್ನು ತೋರಿಸಿಕೊಟ್ಟರು. ಕಲ್ಯಾಣದ ಮಾತುಕತೆಯೇ ಅನುಭವ ಮಂಟಪವಾಯಿತು. ಮಾತು ವಚನವಾಯ್ತು, ಹೀಗಾಗಿಯೇ ಅಕ್ಕ ಮಹಾದೇವಿಯು ಐವತ್ತೆರಡು ರೀತಿಯಲ್ಲಿ ಬಸವಣ್ಣನವರ ಗುಣಗಳನ್ನು ವಿವರಿಸಿ ನಮೋ ನಮೋ ಎಂದಿರುವುದು. ಕೇವಲ ಮಹಾದೇವಿಯಕ್ಕ ಮಾತ್ರವಲ್ಲ ಇಡೀ ವಿಶ್ವವೇ ಅವರ ಅದ್ಭುತವಾದ ಜೀವನ, ಸಾಧನೆ, ಸಮಾಜ ಸೇವೆಗಳಿಗಾಗಿ ತಲೆಬಾಗಿಸುವುದು.

**ಪರಾಮರ್ಶನ ಗ್ರಂಥಗಳು**


- ಬಸವರಾಜು ಎಲ್. (1952). *ಬಸವಣ್ಣನವರ ವಚನಗಳು.* ಗೀತಾ ಬುಕ್ ಹೌಸ್.
- ಹೆಂಡಿ, ಬಿ.ಬಿ. *ಬಸವೇಶ್ವರ.* ಶ್ರೀಬಸವೇಶ್ವರ ಪೀಠ, ಕರ್ನಾಟಕವಿಶ್ವವಿದ್ಯಾಲಯ.
- ಪರಿಮಳ ಗುಂಜಾಳ, ಎಮ್.ಎಸ್. *ಅಕ್ಕಮಹಾದೇವಿ ಚರಿತ್ರೆ.* ಶಾಬಾದಿಮಠ ಬುಕ್–ಡಿಪೊ.
- ಶಾಸ್ತ್ರೀ, ಜಿ.ವಿ. *ಬಸವಣ್ಣನವರ ವಚನಗಳು ಜೀವನಚರಿತ್ರೆ ಮತ್ತು ಆಯ್ದ ವಚನಗಳ ಸಂಗ್ರಹ.*
- ಶ್ರೀನಿವಾಸಮೂರ್ತಿ, ಎಂ.ಆರ್. *ವಚನ ಧರ್ಮಸಾರ.*
- ತಿಪ್ಪೇರುದ್ರಸ್ವಾಮಿ,ಎಚ್. *ಅಲ್ಲಮಪ್ರಭುದೇವ.* ಶ್ರೀಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.